ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1.**

ಆಯವ್ಯಯ ಬಿ1/ಸಕಾಲ/ಇತರೆ:06/2012-13 ದಿನಾಂಕ: 01/10/2012

ಸುತ್ತೋಲೆ

ವಿಷಯ:ಕರ್ನಾಟಕ ಸಕಾಲ ಸೇವೆ ಅಧಿನಿಯಮ-2011ರ ಅಡಿಯಲ್ಲಿ ಶಿಕ್ಷಣ ಇಲಾಖೆಯ ಕೆಲವು ಸೇವೆಗಳನ್ನು ಸೇರಿಸಲು ಅಗತ್ಯ ಮಾಹಿತಿಯನ್ನು ಹಾಗು ಇತರೆ ಮಾಹಿತಿಯನ್ನು ಕಳುಹಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರವರ ಅ.ಸ.ಪತ್ರಸಂಖ್ಯೆ:ಸಿಆಸುಇ/119/ನಾಸೇಖಾ2012 ದಿನಾಂಕ:14/09/2012

2.ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆಯುಕ್ತರ ಆರ್ಥಿಕ ಸಲಹೆಗಾರರು ರವರ ಸುತ್ತೋಲೆಸಂಖ್ಯೆ:ಆಯವ್ಯಯ.3/ವೇತನಪಾವತಿ/7/2012-13 ದಿನಾಂಕ:15/05/2012

3. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆಯುಕ್ತರ ಆರ್ಥಿಕ ಸಲಹೆಗಾರರು ರವರ ಸುತ್ತೋಲೆ ಸಂಖ್ಯೆ:ಆಯವ್ಯಯ/ಬಿ2/ಎ.ಸಿ.ಎನ್.ಡಿ.ಸಿ./2012-13 ದಿನಾಂಕ:06/09/2012

-****-

ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರ ಸೇವಾಸವಲತ್ತುಗಳನ್ನು ಕಾಲಕಾಲಕ್ಕೆ ಇತ್ಯರ್ಥಪಡಿಸಲು ಅನುಕೂಲವಾಗಿವಂತೆ ನೌಕರರ ಸೇವಾಪುಸ್ತಕಗಳನ್ನು ಪೂರ್ಣವಾಗಿ, ದಿನಾಂಕ: 15/10/2012ರ ಒಳಗಾಗಿ ಹೆಚ್.ಆರ್.ಎಂ.ಎಸ್ ನಲ್ಲಿ ಅಳವಡಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು ತಿಳಿಸಿರುವರು. ಸೇವಾ ಪುಸ್ತಕಗಳನ್ನು ಹೆಚ್.ಆರ್.ಎಂ.ಎಸ್ ನಲ್ಲಿ ಅಳವಡಿಸುವ ಕೆಲಸವನ್ನು ಕೆಲವು ಇಲಾಖೆಗಳು ಪೂರ್ಣಗೊಳಿಸಿದ್ದು ಶಿಕ್ಷಣ ಇಲಾಖೆಯಲ್ಲಿ ಈ ಕೆಲಸವು ಬಾಕಿ ಉಳಿದಿರುವ ಬಗ್ಗೆ ಅಸಮಾದಾನವನ್ನು ವ್ಯಕ್ತಪಡಿಸಿರುವರು.

2. ನೌಕರರ ಹಾಗೂ ಅಧಿಕಾರಿಗಳ ಸೇವಾಪುಸ್ತಕಗಳನ್ನು ಹೆಚ್.ಆರ್,ಎಂ.ಎಸ್ ನಲ್ಲಿ ಅಳವಡಿಸಲು ಈಗಾಗಲೇ ಎರಡು ಬಾರಿ ಕಾಲಾವಾಕಾಶವನ್ನು ಸರ್ಕಾರದಿಂದ ಪಡೆದು ತಡೆಹಿಡಿಯಲಾಗಿದ್ದ ವೇತನವನ್ನು ಬಿಡುಗಡೆಮಾಡಲಾಗಿದೆ. ಆದರೂ ಸಹ ನೌಕರರ ಹಾಗು ಅಧಿಕಾರಿಗಳ ಸೇವಾ ಪುಸ್ತಕಗಳನ್ನು ಹೆಚ್.ಆರ್,ಎಂ.ಎಸ್ ನಲ್ಲಿ ಅಳವಡಿಸದೆ ಅನಗತ್ಯ ವಿಳಂಬ ಮಾಡುತ್ತಿರುವುದು ವಿಷಾದನೀಯ

3. ಎ.ಸಿ ಬಿಲ್ಲುಗಳ ಮೂಲಕ 1988-89 ರಿಂದ 2008-2009ರ ವರೆಗೆ 118.23 ಕೋಟಿ ಹಣ ಸೆಳೆದು ಸುಮಾರು ವರ್ಷಗಳಿಂದಲೂ ಸಹ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದೆ ವಿಳಂಬ ಮಾಡಲಾಗುತ್ತಿದೆ.
ಆಯುಕ್ತರು ಸಾ.ಶಿ.ಇಲಾಖೆ.

4. ನೌಕರರ/ಶಿಕ್ಷಕರ ವೇತನವನ್ನು ಕಾಲಕಾಲಕ್ಕೆ ಪಾವತಿಸದೆ ವಿಳಂಬವಾಗಿ ಪಾವತಿಸಲಾಗುತ್ತಿದೆ.

5. ನೌಕರರ ರಜೆ, ಪ್ರಯಾಣಭತ್ಯೆ, ವೈದ್ಯಕೀಯ ವೆಚ್ಚ ಮರುಪಾವತಿ, ನಿವೃತ್ತಿವೇತನ ಮುಂತಾದ ಸವಲತ್ತುಗಳನ್ನು ಸಹಾ ಕಾಲಕಾಲಕ್ಕೆ ತಿರುವಳಿ ಮಾಡದೆ ವಿಳಂಬ ಮಾಡಲಾಗುತ್ತಿದೆ.

ಆದ್ದರಿಂದ ದಿನಾಂಕ: 15/10/2012ರ ಒಳಗಾಗಿ ಹೆಚ್.ಆರ್,ಎಂ.ಎಸ್. ನಲ್ಲಿ ಸೇವಾಪುಸ್ತಕಗಳ ಪೂರ್ಣ ಮಾಹಿತಿಯನ್ನು ಅಳವಡಿಸುವಂತೆ ಎನ್.ಡಿ.ಸಿ ಬಿಲ್ಲುಗಳನ್ನು ತುರ್ತಾಗಿ ಮಹಾಲೇಖಪಾಲರಿಗೆ ಸಲ್ಲಿಸುವಂತೆ, ಹಾಗೂ

ನೌಕರರಿಗೆ ಲಭ್ಯವಿರುವ ಸೇವಾ ಸವಲತ್ತುಗಳನ್ನು ಕಾಲಕಾಲಕ್ಕೆ ಮಂಜೂರು ಮಾಡುವಂತೆ ಸಂಬಂಧಪಟ್ಟ ಡಿ.ಡಿ.ಓ ಹಾಗೂ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ಕೂಡಲೇ ನೀಡುವಂತೆ ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಪ್ರತಿಗಳನ್ನು ಮಾಹಿತಿಗಾಗಿ ವಂದನೆಗಳೊಂದಿಗೆ:**

1.ಸರ್ಕಾರದ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, 6ನೇ ಮಹಡಿ, 2ನೇ ಹಂತ ಬಹುಮಹಡಿ ಕಟ್ಟಡ, ಬೆಂಗಳೂರು–1 ರವರಿಗೆ.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–1 ರವರಿಗೆ.

3.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಆಯವ್ಯಯ ಮತ್ತು ಸಂಪನ್ಮೂಲ)ಆರ್ಥಿಕ ಇಲಾಖೆ, ವಿದಾನಸೌದ ಬೆಂಗಳೂರು ರವರಿಗೆ

**ಪ್ರತಿಗಳನ್ನು ಸೂಕ್ತ ಕ್ರಮಕ್ಕಾಗಿ.**

1.ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಬಿಯಾನ ಬೆಂಗಳೂರು

2.ಅಪರ ಆಯುಕ್ತರು ಸಾ.ಶಿ.ಇಲಾಖೆ. ಹೊಸ ಸಾ.ಕಟ್ಟಡ ಬೆಂಗಳೂರು

3. ಅಪರ ಆಯುಕ್ತರು ಸಾ.ಶಿ.ಇಲಾಖೆ. ಧಾರವಾಡ/ಗುಲ್ಬರ್ಗ

4.ನಿರ್ದೇಶಕರು ಪ್ರೌಢಶಿಕ್ಷಣ/ಪ್ರಾಥಮಿಕ/ಭಾಷಾ ಅಲ್ಪಸಂಖ್ಯಾತರು/ಡಿ.ಎಸ್.ಇ.ಆರ್.ಟಿ/.ನಿರ್ದೇಶಕರು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು/ ಕರ್ನಾಟಕ ಪಠ್ಯಪುಸ್ತಕ ಸಂಘ,ಬೆಂಗಳೂರು

5.ರಾಜ್ಯದ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ ಸಾ.ಶಿ. ಇಲಾಖೆ,

6. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳ ಸೂಕ್ತ ಕ್ರಮಕ್ಕಾಗಿ

7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ

8. ಕಛೇರಿ ಪ್ರತಿ